# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಂಪನಿಯ ನೊಂದಾಯಿತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ನಿಗಮದ ಐಡೆಂಟಿಟಿ ಸಂಖ್ಯೆ(ಸಿ.ಐ.ಎನ್): U40109KA1999SGC025521, ವೆಬ್‌ಸೈಟ್: www.kptcl.com

ಇ-ಅಂಚೆ:eeesrshtgly@gmail.com

ದೂರವಾಣಿ: 0821-2404889

ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್)ರವರ ಕಛೇರಿ,
ಟಿ.ಎಲ್&ಎಸ್‌ಎಸ್ ಹೂಟಗಳ್ಳಿ ವಿಭಾಗ,
ಎಸ್ ಆವರಣ, ಎನ್.ಆರ್.ಮೊಹಲ್ಲಾ,ಮೈಸೂರು.


ಕ್ರಮ ಸಂಖ್ಯೆ: ಕಾನಿಇಂ(ವಿ)/ಹೂಟಗಳ್ಳಿ/ಸಇಂತಾ-1/ಕ-137/2019-20/3870-73 ದಿನಾಂಕ: 26 JUN 2019

ಗೆ,

ವಲಯ ಅರಣ್ಯಾಧಿಕಾರಿ,
ಮಡಿಕೇರಿ ವಲಯ,
ಮಡಿಕೇರಿ.

ಮಾನ್ಯರೆ,

109/2613 9/7/2019

ವಿಷಯ:- Renewal of lease period of 1.00 H.A forest land of Karnangeri reserve forest Sy No.236/1 karnangeri village already established 66/11 kV S/s in favour of Executive Engineer(Ele), KPTCL, TL&SS Hootagally Division, N.R.Mohalla, FTS Compound, Mysuru-570 007 -ಅನುಪಾಲನ ವರದಿ ಬಗ್ಗೆ.

ಉಲ್ಲೇಖ:-1) ತಮ್ಮ ಕಛೇರಿ ಪತ್ರ ಸಂಖ್ಯೆ ವಅಅ/ಮಡಿಕೇರಿ/66 ಕೆ.ವಿ/ಸಿ ಆರ್/31/2019-20/187 ದಿನಾಂಕ 19-06-2019.

ವಿಷಯಕ್ಕೆ ಸಂಬಂಧಿಸಿದಂತೆ, ಕರ್ಣಂಗೇರಿ ಮೀಸಲು ಅರಣ್ಯ ಪ್ರದೇಶದ ಸರ್ವೆ ನಂ 236/1 ರಲ್ಲಿ 1 ಹೆಕ್ಟೇರ್ ಜಾಗದಲ್ಲಿ ಈಗಾಗಲೇ ನಿರ್ಮಾಣವಾಗಿರುವ 66/11 ಕೆ.ವಿ ವಿ.ವಿ ಕೇಂದ್ರದ ಲೀಸ್ ಅವಧಿಯ ನವೀಕರಣದ ಸಂಬಂಧ ಈ ಕೆಳಕಂಡಂತೆ ಅನುಪಾಲನ ವರದಿಯನ್ನು ಸಲ್ಲಿಸಲಾಗಿದೆ.

1. ವಿ.ವಿ.ಕೇಂದ್ರವನ್ನು ನಿರ್ಮಿಸಿರುವ ಜಾಗದ ಪ್ರಸ್ತುತ ಸ್ಥಿತಿಯು ಮೀಸಲು ಅರಣ್ಯ ಪ್ರದೇಶವಾಗಿಯೇ ಉಳಿದಿರುತ್ತದೆ ಮತ್ತು ಮುಂದುವರೆಯುತ್ತದೆ.
2. **ವಿ.ವಿ.ಕೇಂದ್ರವು ಲೀಸ್ ಅವಧಿಯ ಅರಂಭದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಅನುಸಾರವಾಗಿಯೇ ನಿರ್ಮಾಣವಾಗಿರುತ್ತದೆ ಮತ್ತು ಮುಂದುವರೆಯುತ್ತದೆ.**
3. ಯಾವ ಉದ್ದೇಶಕ್ಕಾಗಿ ಸದರಿ ಜಾಗವನ್ನು ಪಡೆಯಲಾಗಿದೆಯೋ, ಆ ಉದ್ದೇಶಕ್ಕಾಗಿಯೇ ಉಪಯೋಗಿಸಲ್ಪಡುತ್ತಿರುತ್ತದೆ.
4. ಲೀಸ್ ಅವಧಿ ನವೀಕರಣವು ಸರ್ಕಾರದಿಂದ ನೀಡುವ ಅವಧಿಗೆ ಪಡೆಯಲು ಮತ್ತು ತತ್ಸಂಬಂಧ ನೀಡುವ ಲೀಸ್ ಮೊತ್ತವನ್ನು ಪಾವತಿಸಲು ಒಪ್ಪಿಗೆ ಇರುತ್ತದೆ.
5. ವಿ.ವಿ.ಕೇಂದ್ರವು ಹಾಲಿ 1 ಹೆಕ್ಟರ್‌ಗಿಂತ ಹೆಚ್ಚು ಜಾಗವನ್ನು ಬಳಸಿಕೊಂಡಿರುವುದಿಲ್ಲಾ.
6. ಸದರಿ ಜಾಗವನ್ನು ಬೇರೆ ಯಾವುದೆ ಉದ್ದೇಶಕ್ಕಾಗಲಿ ಅಥವಾ ವ್ಯಕ್ತಿಗಾಗಲಿ ಪರಭಾರೆ ಮಾಡಿರುವುದಿಲ್ಲಾ.
7. ಸದರಿ ಜಾಗದಲ್ಲಿ, ಜಾಗವು ಶಾಶ್ವತವಾಗಿ ಹಾನಿಕಾರವಾಗುವ ಯಾವುದೇ ಕ್ರಿಯೆಗಳನ್ನು ಮಾಡಿರುವುದಿಲ್ಲಾ ಹಾಗೂ ಮಾಡುವುದಿಲ್ಲಾ.
8. ಸರ್ಕಾರದಿಂದ ಕಾಲ ಕಾಲಕ್ಕೆ ನಿಗದಿಪಡಿಸುವ ಅಥವಾ ಜಾರಿ ಮಾಡುವ ನಿಯಮ ಮತ್ತು ಕಾಯ್ದೆಗಳಿಗೆ ಬದ್ಧವಾಗಿರುತ್ತೇವೆ ಎಂದು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ.

ತಮ್ಮ ವಿಶ್ವಾಸಿ,

26/6/19

ಕಾರ್ಯನಿರ್ವಾಹಕ ಇಂಜಿನಿಯರ್(ವಿ),

**ಕರ್ನಾಟಕ ಅರಣ್ಯ ಇಲಾಖೆ**

ಸಂಖ್ಯೆ: ಭೂಮಿ/ಎಫ್‌ಸಿ/ಕರ್ಣಂಗೇರಿ/ಸಿಆರ್-53/98-99

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಮಡಿಕೇರಿ ವಿಭಾಗ, ಮಡಿಕೇರಿ,
ದಿನಾಂಕ: 23-09-2019.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಕೊಡಗು ವೃತ್ತ,
ಮಡಿಕೇರಿ.

ಮಾನ್ಯರೆ,

**ವಿಷಯ** : ಕರ್ಣಂಗೇರಿ ಕೆವಿ ಸಬ್‌ಸ್ಟೇಷನ್ ಗುತ್ತಿಗೆ ಅವಧಿ ನವೀಕರಣ ಸಂಬಂಧ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ** 1. ತಮ್ಮ ಕಚೇರಿ ಪತ್ರ ಸಂಖ್ಯೆ: ಭೂಮಿ/(ಎಸ್‌ಎಲ್)/ಸಿಆರ್-12/(2003-04)/2013-14 ದಿನಾಂಕ: 28-02-2019 ಮತ್ತು 11-09-2019.

2. ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 27-03-2019.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಕರ್ಣಂಗೇರಿ ಗ್ರಾಮದ ಸ.ನಂ. 236/1 ರಲ್ಲಿ 1.00 ಹೆ. ಅರಣ್ಯ ಪ್ರದೇಶವನ್ನು ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಯವರಿಗೆ 66.11 ಕೆವಿ ಸಬ್ ಸ್ಟೇಷನ್ ಸ್ಥಾಪಿಸಲು ಸರ್ಕಾರದ ಆದೇಶದಂತೆ 10 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದ್ರಿ ಗುತ್ತಿಗೆ ಅವಧಿ ಮುಗಿದಿರುವ ಕಾರಣ ಗುತ್ತಿಗೆ ಅವಧಿಯನ್ನು ನವೀಕರಿಸುವ ಸಲುವಾಗಿ ಉಲ್ಲೇಖ(2)ರ ಪತ್ರದಲ್ಲಿ ಸಲ್ಲಿಸಲಾಗಿರುವ ಮಾಹಿತಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ವರದಿ ಸಲ್ಲಿಸಲು ಸೂಚಿಸಿರುತ್ತೀರಿ. ಅದರಂತೆ ಕೆ.ವಿ. ಸಬ್‌ಸ್ಟೇಷನ್ ಇರುವ ಜಾಗದ ನಕ್ಷೆಯನ್ನು ಈ ಕೆಳಸಹಿದಾರ ರವರಿಂದ ದೃಢೀಕರಿಸಿ, ನಕ್ಷೆಯಲ್ಲಿ ಟೋಪೋಶೀಟ್ ಸಂಖ್ಯೆಯನ್ನು ದಾಖಲಿಸಿ ಹಾಗೂ 66.11 ಕೆವಿ ಉಪ ಕೇಂದ್ರ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಅನುಮೋದನೆ ಸಂದರ್ಭದಲ್ಲಿ ಉಪಯೋಗಿ ಸಂಸ್ಥೆಯವರಿಗೆ ವಿಧಿಸಿರುವ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ಸದರಿಯವರಿಂದ ಪಡೆದುಕೊಂಡು ಮೇಲಿನ ಮಾಹಿತಿಗಳನ್ನು ಅಂತರ್ಜಾಲದ ಮೂಲಕ ಎಫ್‌ಸಿ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡಿ ಮತ್ತು ಸದರಿ ವರದಿಯ ಹಾರ್ಡ್‌ಕಾಪಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.


ಗೌರವಗಳೊಂದಿಗೆ

ತಮ್ಮ ನಂಬುಗೆಯ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವಿಭಾಗ, ಮಡಿಕೇರಿ

19-20//A3/Letter/Ccf Letter

TOPO SHEET NUMBER : 48P/15/NW




RANGE FOREST OFFICER
MADIKERI RANGE

Deputy Conservator of Forests